ಇ) ಹಾಗಿದ್ದಲ್ಲಿ, ಇಲ್ಲಿಯವರೆಗೆ ಲೀಸ್ ಪಡೆದ ಮಾಲೀಕರುಗಳಿಗೆ ಎಷ್ಟು ಪರಿಹಾರದ ಹಣವನ್ನು ಸಂದಾಯ ಮಾಡಲಾಗಿದೆ? (ಫಲಾನುಭವಿಗಳ ಹೆಸರು, ವಿಳಾಸ ಹಾಗೂ ಪಡೆದಿರುವ ಹಣದ ವಿವರ ನೀಡುವುದು)

ಶ್ರೀ ವಿನಯಕುಮಾರ್ ಸೊರಕೆ (ನಗರಾಭಿವೃದ್ಧಿ ಸಚಿವರು)

ಅ) ಹೌದು

ಆ) ಲೀಸ್ ಅವಧಿ ಮುಗಿಯದ ಆಸ್ತಿಗಳ ಬಾಧಿತ ಕಟ್ಟಡಗಳಿಗೆ ಮಾತ್ರ ಮೌಲ್ಯಮಾಪನದನ್ವಯ ಪರಿಹಾರ ಧನ ಕೊಡಲಾಗುವುದು.

ಇ) ₹. 20,90,671 (ಕಟ್ಟಡಕ್ಕೆ ಮಾತ್ರ)
ಶ್ರೀ. ಎಂ.ಎಂ.ಪೀರಜಾದೆ
ಶ್ರೀ. ಬಿ.ಆರ್.ಪಾಟೀಲ್
ಶ್ರೀ. ಎಸ್.ಎಸ್.ಮಠ
ವಿಳಾಸ ಟೂರಿಸ್ಟ್ ಹೋಟೆಲ್ ಮಹಾತ್ಮ ಗಾಂಧಿ ರಸ್ತೆ, ವಿಜಯಪುರ.

ಇಲಾಖಾ ಪುನರಚನೆಯಿಂದಾಗಿರುವ ಗೊಂದಲ

81 (93); ಶ್ರೀ ಮಕಬುಲ್ ಎಸ್. ಭಗವಾನ್ [ಬಿಜಾಪುರ ನಗರ]

ಅ) ಕರ್ನಾಟಕ ರಾಜ್ಯದಲ್ಲಿ ಇಲಾಖಾ ಪುನರ್ ರಚನೆಯಿಂದ ಪಶುವೈದ್ಯಕೀಯ ಪರಿವೀಕ್ಷಕರಿಗೆ ಕೆಲಸಕ್ಕೆ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ, ಪಶುವೈದ್ಯಕೀಯ ಪರೀವೀಕ್ಷಕರಿಗೆ ಇಲಾಖೆ ಪುನರ್ ರಚನೆಯ ಗೊಂದಲವನ್ನು ಸರಿಪಡಿಸಿ, ಅವರಿಗೆ ಸ್ಥಳ ನಿಯೋಜಿಸಲು ಯಾವ ಕ್ರಮ ಕೈಗೊಳ್ಳಲಾಗುವುದು;

ಇ) ಇಲಾಖೆಯ ಪುನರ್ ರಚನೆಯ ಗೊಂದಲವನ್ನು ಶೀಘ್ರದಲ್ಲಿಯೇ ನಿವಾರಿಸಿ ಇವರಿಗೆ ಅನುಕೂಲ ಮಾಡಿಕೊಡಲಾಗುವುದೇ?

ಶ್ರೀ ಟಿ.ಬಿ. ಜಯಚಂದ್ರ (ಕಾನೂನು, ಸಂಸದೀಯ ವ್ಯವಹಾರಗಳು, ಪಶುಸಂಗೋಪನೆ ಹಾಗೂ ಮುಜರಾಯಿ ಸಚಿವರು)

ಅ) ಇಲಾಖಾ ಪುನರ್ ರಚನೆಯಿಂದ ಪಶುವೈದ್ಯಕೀಯ ಪರೀಕ್ಷಕರುಗಳಿಗೆ ತೊಂದರೆಯಾಗಿರುವುದಿಲ್ಲ.

ಆ) ಇಲಾಖಾ ಪುನರ್ ರಚನೆ ಪೂರ್ಣ ಪ್ರಮಾಣದಲ್ಲಿ ಜಾರಿಗೊಳಿಸಲು ಕ್ರಮ ವಹಿಸಲಾಗುತ್ತಿದ್ದು, ಪಶುವೈದ್ಯಕೀಯ ಪರೀಕ್ಷಕರುಗಳಿಗೆ ಸ್ಥಳ ನಿಯುಕ್ತಿಗೊಳಿಸಲು ಕ್ರಮ ವಹಿಸಲಾಗುವುದು.

ಇ) ಇಲಾಖಾ ಪುನರ್ ರಚನೆಯನ್ನು ಪೂರ್ಣಗೊಳಿಸಲು ಕ್ರಮ ವಹಿಸಲಾಗುತ್ತಿದೆ.

ದೇವಸ್ಥಾನದ ಅಭಿವೃದ್ಧಿ ಕಾಮಗಾರಿಗಳು

82 (94); ಶ್ರೀ ಮಕಬುಲ್ ಎಸ್. ಬಾಗವಾನ್

ಅ) ಕಳೆದ 3 ವರ್ಷಗಳಲ್ಲಿ ವಿಜಯಪುರ (ನಗರ) ಮತಕ್ಷೇತ್ರಕ್ಕೆ ಮುಜರಾಯಿ ಇಲಾಖೆಯಿಂದ ಎಷ್ಟು ಅನುದಾನ ಬಿಡುಗಡೆಯಾಗಿರುತ್ತದೆ;

ಆ) ಈ ಅನುದಾನದಲ್ಲಿ ಯಾವ ಯಾವ ದೇವಸ್ಥಾನಗಳ ಕಾಮಗಾರಿಗಳನ್ನು ಕೈಗೊಳ್ಳಲಾಗಿರುತ್ತದೆ;

ಇ) ಬಿಡುಗಡೆಯಾದ ಅನುದಾನದಲ್ಲಿ ದೇವಸ್ಥಾನ ಕಮಿಟಿಯವರು ಅಭಿವೃದ್ಧಿ ಕಾಮಗಾರಿಗಳನ್ನು ಪೂರ್ತಿಗೊಳಿಸಿರುತ್ತಾರೆಯೇ;

ಈ) ಹಾಗಿದ್ದಲ್ಲಿ, ಯುಟಿಲೈಜೇಷನ್ ಸರ್ಟಿಫೀಕೇಟ್‌ನ್ನು ಸರ್ಕಾರ ಪಡೆದಿದೆಯೇ? (ವಿವರ ನೀಡುವುದು)